**<u>ಮೆ: ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ</u>**

C.C.No.1529/2022
CW20/PW10

| | |
|---|---|
| ಹೆಸರು | ಕೃಷ್ಣಪ್ಪ ಮಾಂಗ |
| ತಂದೆ ಹೆಸರು | ಭರಮಪ್ಪ |
| ವಯಸ್ಸು | 61 ವರ್ಷ |
| ಉದ್ಯೋಗ | ನಿವೃತ್ತ ಪಿ.ಎಸ್.ಐ |
| ವಾಸಸ್ಥಳ | ಮುಧೋಳ |

**ದಿನಾಂಕ: 24-2-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ :- ಎ.ಪಿ.ಪಿ ರವರಿಂದ.</u>**

ನಾನು 2020 ರಿಂದ 2025 ರವರೆಗೆ ಮುಧೋಳ ಪೋಲಿಸ ಠಾಣೆಯಲ್ಲಿ ಪಿ.ಎಸ.ಐ ಆಗಿ ಕಾರ್ಯ ನಿರ್ವಹಿಸಿ ನಿವೃತ್ತಿಯಾಗಿರುತ್ತೇನೆ.

ದಿನಾಂಕ 09.07.2022 ರಂದು ರಾತ್ರಿ 9-00 ಗಂಟೆ ಸುಮಾರಿಗೆ ನಾನು ಠಾಣಾ ಕರ್ತವ್ಯದಲ್ಲಿರುವಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನಿಪಿ-5 ರಂತೆ ಒಂದು ಲಿಖಿತ ಪಿರ್ಯಾದಿಯನ್ನು ನೀಡಿದ್ದು, ನಾನು ಅದರ ಸಾರಾಂಶದ ಮೇಲಿಂದ ನಮ್ಮ ಠಾಣಾ ಗುನ್ನೆ ನಂ.172/2022 ನ್ನು ದಾಖಲಿಸಿಕೊಂಡು ಪ್ರ.ವ.ವ ವನ್ನು ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧೀಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಸದರಿ ಪ್ರಕರಣವು ಘೋರ ಅಪರಾಧಕ್ಕೆ ಸಂಬಂದಿಸಿದ್ದರಿಂದ ಸದರಿ ವಿಷಯವನ್ನು ಚಾಸಾ-21 ರವರಿಗೆ ತಿಳಿಸಿದಾಗ ಅವರು ಬೇರೊಂದು ಪ್ರಕರಣದ ತನಿಖೆಯಲ್ಲಿ ನೀರತರಾಗಿದ್ದರಿಂದ ಸದರಿ ಪ್ರಕರಣದ ತನಿಖೆಯನ್ನು ನನಗೆ ಮಾಡಲು ಹೇಳಿದರು. ನಂತರ ಸದರಿ ದಿನಾಂಕದಂದು ರಾತ್ರಿ 10-15 ರಿಂದ 11-15 ಗಂಟೆಯವರೆಗೆ ಮುಧೋಳ ಸರ್ಕಾರಿ ಆಸ್ಪತ್ರೆ ಶವಾಗಾರಕ್ಕೆ ಬೇಟಿ ಕೊಟ್ಟು ಚಾಸಾ-4 ಮತ್ತು 5 ರವರ ಸಮಕ್ಷಮ ನಿಪಿ-14 ರಂತೆ ಶವ ಪಂಚನಾಮೆಯನ್ನು ಮಾಡಿ ನಿಪಿ-6 ಮತ್ತು 7 ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ನಂತರ ಸದರಿ ದಿನಾಂಕದಂದು ಚಾಸಾ-9 ರಿಂದ 14 ರವರ ಹೇಳಿಕೆಗಳನ್ನು ಪಡೆದುಕೊಂಡು ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಪಿ ಎಮ್ ಪರೀಕ್ಷೆ ಆದ ನಂತರ ಶವವನ್ನು ಅದರ ವಾರಸುದಾರರಿಗೆ ಮುಟ್ಟಿಸಿದ ಬಗ್ಗೆ ನಮ್ಮ ಸಿಬ್ಬಂದಿಯವರು ವರದಿಯನ್ನು ನೀಡಿದ್ದನ್ನು ಸ್ವೀಕರಿಸಿಕೊಂಡಿರುತ್ತೇನೆ. ನಂತರ ದಿನಾಂಕ 10.07.2022 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-21 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಸಾಕ್ಷಿಯು ನಿಪಿ-5 ಪಿರ್ಯಾದಿ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-5(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-14 ಶವ ಪಂಚನಾಮೆ ಮೇಲೆ ಇರುವ ತನ್ನ ಎರಡು ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗ ನಿಪಿ-14(ಎ) ಮತ್ತು ನಿಪಿ-14(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ತಾನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟ ಪ್ರ.ವ.ವ ವನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-16 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು :- ಆರೋಪಿ ಪರ ಶ್ರೀ.ಕೆ.ಎಮ್.ಕೆ ವಕೀಲರಿಂದ.</u>**

ಅಪಘಾತವಾದಾಗ ನಾನು ಮುಧೋಳ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಚಾಸಾ-9 ರಿಂದ 14 ರವರ ಹೇಳಿಕೆಗಳನ್ನು ನಾನು ಸರ್ಕಾರಿ ಆಸ್ಪತ್ರೆ ಮುಧೋಳದಲ್ಲಿ ಪಡೆದಿರುತ್ತೇನೆ.

ದಿನಾಂಕ 09.07.2022 ರಂದು ರಾತ್ರಿ 9-00 ಗಂಟೆ ಸುಮಾರಿಗೆ ನಾನು ಠಾಣಾ ಕರ್ತವ್ಯದಲ್ಲಿರುವಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನಿಪಿ-5 ರಂತೆ ಒಂದು ಲಿಖಿತ ಫಿರ್ಯಾದಿಯನ್ನು ನೀಡಿದ್ದು, ನಾನು ಅದರ ಸಾರಾಂಶದ ಮೇಲಿಂದ ನಮ್ಮ ಠಾಣಾ ಗುನ್ನೆ ನಂ.172/2022 ನ್ನು ದಾಖಲಿಸಿಕೊಂಡು ಪ್ರ.ವ.ವ ವನ್ನು ನಿಪಿ-16 ರಂತೆ ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧೀಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸದರಿ ಪ್ರಕರಣವು ಘೋರ ಅಪರಾಧಕ್ಕೆ ಸಂಬಂದಿಸಿದ್ದರಿಂದ ಸದರಿ ವಿಷಯವನ್ನು ಚಾಸಾ-21 ರವರಿಗೆ ತಿಳಿಸಿದಾಗ ಅವರು ಬೇರೊಂದು ಪ್ರಕರಣದ ತನಿಖೆಯಲ್ಲಿ ನೀರತರಾಗಿದ್ದರಿಂದ ಸದರಿ ಪ್ರಕರಣದ ತನಿಖೆಯನ್ನು ನನಗೆ ಮಾಡಲು ಹೇಳಿದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸದರಿ ದಿನಾಂಕದಂದು ರಾತ್ರಿ 10-15 ರಿಂದ 11-15 ಗಂಟೆಯವರೆಗೆ ಮುಧೋಳ ಸರ್ಕಾರಿ ಆಸ್ಪತ್ರೆ ಶವಾಗಾರಕ್ಕೆ ಬೇಟಿ ಕೊಟ್ಟು ಚಾಸಾ-4 ಮತ್ತು 5 ರವರ ಸಮಕ್ಷಮ ನಿಪಿ-14 ರಂತೆ ಶವ ಪಂಚನಾಮೆಯನ್ನು ಮಾಡಿ ನಿಪಿ-6 ಮತ್ತು 7 ಭಾವಚಿತ್ರಗಳನ್ನು ತೆಗೆಸಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸದರಿ ದಿನಾಂಕದಂದು ಚಾಸಾ-9 ರಿಂದ 14 ರವರ ಹೇಳಿಕೆಗಳನ್ನು ಪಡೆದುಕೊಂಡು ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಪಿ.ಎಮ್ ಪರೀಕ್ಷೆ ಆದ ನಂತರ ಶವವನ್ನು ಅದರ ವಾರಸುದಾರರಿಗೆ ಮುಟ್ಟಿಸಿದ ಬಗ್ಗೆ ನಮ್ಮ ಸಿಬ್ಬಂದಿಯವರು ವರದಿಯನ್ನು ನೀಡಿದ್ದನ್ನು ಸ್ವೀಕರಿಸಿಕೊಂಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ದಿನಾಂಕ 10.07.2022 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-21 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ದಿವಾಣಿ ನ್ಯಾಯಾಧಿಪಿಶರು ಹಾಗೂ
ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2026.03.11 11:06:19 +0530